# ಸೆಲೆಬ್ರಿಟಿ

■ ಹನಿ

## ಕಮಲ್ ತಲೆನೋವು



ಭಾರತೀಯ ಚಿತ್ರಜಗತ್ತು ಕಂಡ ಅದ್ಭುತ ಕಲಾವಿದ ಕಮಲಹಾಸನ್ ಏನೇ ಮಾಡಿದರೂ ಸುದ್ದಿಯಾಗುತ್ತದೆ. ಇದೀಗ ಈತನ ಹೊಸ ಚಿತ್ರ 'ವಿಶ್ವರೂಪಂ' ಬಿಡುಗಡೆಗೆ ಮುನ್ನವೇ ವಿವಾದ ಸೃಷ್ಟಿಸಿದೆ. ತಮಿಳು, ತೆಲುಗು, ಹಿಂದಿಯಲ್ಲಿ ಏಕಕಾಲಕ್ಕೆ ಚಿತ್ರೀಕರಣವಾದ ಈ ಸಿನಿಮಾ ಜನವರಿ 11ರಂದು ಬಿಡುಗಡೆ ಆಗಬೇಕಿದ್ದುದು ಈಗ ಜ.25ಕ್ಕೆ ಮುಂದೂಡಲ್ಪಟ್ಟಿದೆ. "ಕೇವಲ ಥಿಯೇಟರ್‌ಗಳಲ್ಲಿ ಸಿನಿಮಾ ಬಿಡುಗಡೆ ಮಾಡುವುದು ಹಳೇ ಥಿಯರಿ; ಹೊಸ ಕಾಲದ ತಂತ್ರಜ್ಞಾನವನ್ನು ಬಳಸಿ ಮನೆಮನೆಗೆ ಚಿತ್ರ ತಲುಪಿಸಬೇಕು" ಎಂದು ಹೊರಟ ಕಮಲ್‌ಗೆ ತಡೆಯೊಡ್ಡಲಾಗಿದೆ. ಥಿಯೇಟರ್‌ನಲ್ಲಿ ಬಿಡುಗಡೆಯಾಗುವ ಒಂದು ದಿನ ಮುನ್ನ ಡಿಟಿಎಚ್‌ನಲ್ಲಿ ವಿಶೇಷ ಚಂದಾದಾರರಿಗೆ ಮಾತ್ರ (ತಮಿಳಿಗೆ ಸಾವಿರ ರೂಪಾಯಿ– ತೆಲುಗು, ಹಿಂದಿಗೆ 500 ರೂಪಾಯಿ) ಒಮ್ಮೆ ಚಿತ್ರ ಪ್ರದರ್ಶನ ಮಾಡುವುದು ಕಮಲ್ ಯೋಜನೆಯಾಗಿತ್ತು. "ಹೀಗಾದರೆ ಥಿಯೇಟರಿಗೆ ಜನ ಬರಲ್ಲ" ಎಂದು ಚಿತ್ರ ಪ್ರದರ್ಶಕರ ಸಂಘ ತಕರಾರು ಎತ್ತಿದ್ದೇ ಮುಂದೂಡಿಕೆಗೆ ಕಾರಣ.

ಈ ಸಿನಿಮಾ ಚಿತ್ರೀಕರಣ ಹಂತದಲ್ಲೇ ವಿವಾದ ಎಬ್ಬಿಸಿತ್ತು. ಹಿಂದೂ ಮಕ್ಕಳ್ ಕಚ್ಚಿ ಎಂಬ ಸಂಘಟನೆ ಚಿತ್ರದ ಸಂಸ್ಕೃತ ಟೈಟಲ್‌ಅನ್ನು (ವಿಶ್ವರೂಪಂ) ವಿರೋಧಿಸಿ, 'ಕಮಲಹಾಸನ್ ತಮಿಳು ವಿರೋಧಿ' ಎಂದು ಗಲಾಟೆ ಮಾಡಿತ್ತು. ಶೂಟಿಂಗ್ ಆರಂಭವಾದ ಬಳಿಕ ವಿಳಂಬದ ಕಾರಣಕ್ಕಾಗಿ ಚಿತ್ರದ ನಿರ್ದೇಶಕ ಸೆಲ್ವರಾಘವನ್ ಎತ್ತಂಗಡಿಯಾಗಿ, ಸ್ವತಃ ಕಮಲ್ ನಿರ್ದೇಶನದ ಹೊಣೆ ಹೊತ್ತಿದ್ದರು. 2 ಕೋಟಿ ರೂಪಾಯಿ ಪಡೆದು ಚಿತ್ರದ ಹೀರೋಯಿನ್ ಆಗಲು ಒಪ್ಪಿದ್ದ ಸೋನಾಕ್ಷಿ ಸಿನ್ಹಾ ವಿಳಂಬದಿಂದಾಗಿ ಆಫರ್ ಕೈಬಿಟ್ಟದ್ದೂ ಆಯಿತು. ಇನ್ನೊಬ್ಬ ಹೀರೋಯಿನ್ ಇಶಾ ಶೆರ್ವಾನಿ ಕೂಡಾ ಡ್ರಾಪ್ ಆದಳು. ಚಿತ್ರದಲ್ಲಿ ಮುಸ್ಲಿಮರನ್ನು ಕೆಟ್ಟದ್ದಾಗಿ ತೋರಿಸಲಾಗಿದೆ ಎಂದು ದೂರಿ ಕೆಲವು ಮುಸ್ಲಿಂ ಸಂಘಟನೆಗಳೂ ಚಿತ್ರ ಬಿಡುಗಡೆಗೆ ತಕರಾರು ಎತ್ತಿದ್ದವು. ಇಷ್ಟಾಗಿಯೂ ಚಿತ್ರ ಸಿದ್ಧವಾಗಿದೆ. ಆದರೆ ಈಗ ಥಿಯೇಟರ್ ಮಾಲೀಕರ ಅಡ್ಡಿ!

ಕಮಲ್ ಈಗಾಗಲೆ 'ಮರ್ಮಯೋಗಿ' ಮತ್ತು 'ತಲೈವನ್ ಇರುಕ್ಕಿರನ್' ಎಂಬ ಎರಡು ಚಿತ್ರಗಳನ್ನು ಘೋಷಣೆ ಮಾಡಿ ಬಳಿಕ ಡ್ರಾಪ್ ಮಾಡಿದ್ದಾರೆ. ಹಾಗಾಗಿ 'ವಿಶ್ವರೂಪಂ' ಮೇಲೆ ಅಭಿಮಾನಿಗಳ ನಿರೀಕ್ಷೆ ಹೆಚ್ಚಿದೆ. ಚಿತ್ರದ 'ಆರೋ ತ್ರೀ ಡಿ ಸೌಂಡ್' ತಂತ್ರಜ್ಞಾನ ಭಾರತದಲ್ಲಿ ಇದೇ ಮೊದಲ ಬಾರಿಗೆ ಚಿತ್ರವೊಂದಕ್ಕೆ ಬಳಸಲಾಗಿದೆಯಂತೆ. ಜಗತ್ತಿನಲ್ಲಿ ಈ ಹಿಂದೆ 'ರೆಡ್ ಟೇಲ್ಸ್' ಎಂಬ ಸಿನಿಮಾ ಬಿಟ್ಟರೆ ಬೇರೆ ಯಾರೂ ಈ ತಂತ್ರಜ್ಞಾನ ಬಳಸಿಲ್ಲವಂತೆ. ಅಮೆರಿಕ, ಕೆನಡಾ, ಜೋರ್ಡಾನ್, ಚೆನ್ನೈ, ಮುಂಬೈಗಳಲ್ಲಿ ಶೂಟಿಂಗ್ ನಡೆದಿರುವ ಈ ಸಿನಿಮಾ ಹಾಲಿವುಡ್‌ನ 'ಮಿಶನ್ ಇಂಪಾಸಿಬಲ್' ಮಾದರಿಯ ಸ್ಪೈ –ಥ್ರಿಲ್ಲರ್ ಸಿನಿಮಾ ಎನ್ನಲಾಗುತ್ತಿದೆ. ವಿವಾದ ಏನೇ ಇದ್ದರೂ ಸ್ವತಃ ಕಮಲ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿರುವ ಈ ಸಿನಿಮಾ ರಂಜಿಸುವುದರ ಬಗ್ಗೆ ಅನುಮಾನವಿಲ್ಲ. 'ಈ ಸಿನಿಮಾ 250 ಕೋಟಿ ರೂಪಾಯಿ ಆದಾಯ ಗಳಿಸಲಿದೆ' ಎಂದು ಕಮಲ್ ಈಗಾಗಲೆ ಘೋಷಿಸಿದ್ದಾರೆ.

## 'ದೇವಮಾನವ'ನ ವಿವಾದ



ಅಹ್ಮದಾಬಾದ್‌ನಲ್ಲಿ ಆಶ್ರಮ ಹೊಂದಿ, ದೇಶಾದ್ಯಂತ ಭಕ್ತರನ್ನು ಪಡೆದಿರುವ ಅಸಾರಾಂ ಬಾಪು ಎಂಬ ಸ್ವಘೋಷಿತ 'ದೇವಮಾನವ' ದೆಹಲಿ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ 'ಸಡಿಲ ಮಾತು'ಗಳನ್ನಾಡಿ ದೇಶಾದ್ಯಂತ ಟೀಕೆಗೆ ಒಳಗಾಗಿದ್ದಾರೆ. "ಅತ್ಯಾಚಾರಕ್ಕೆ ಒಳಗಾದ ಹುಡುಗಿ ಅಣ್ಣಾ ಎಂದು ಕರೆದು ಕೈಮುಗಿದು ಬೇಡಿಕೊಂಡಿದ್ದರೆ ಅವರು ಅತ್ಯಾಚಾರ ಮಾಡುತ್ತಿರಲಿಲ್ಲ" ಎನ್ನುವ ಈ ಸಂತ ಮಹಾರಾಜರ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ. ತಮ್ಮ ಮಾತಿನ ವಿರುದ್ಧ ಹುಲಿಗಳಂತೆ ಎರಗಿರುವ ಮಾಧ್ಯಮಗಳನ್ನು 'ಬೊಗಳುವ ನಾಯಿಗಳು' ಎಂದು ಕರೆದು ಮರುದಿನ ಮತ್ತೊಂದು ವಿವಾದ ಉಂಟು ಮಾಡಿದ್ದಾರೆ. ಕೊನೆಗೆ ಭಕ್ತರಿಂದಲೂ ಕಿವಿ ಹಿಂಡಿಸಿಕೊಂಡು, 'ಅತ್ಯಾಚಾರದಲ್ಲಿ ಹುಡುಗಿಯದ್ದೇ ತಪ್ಪು ಎಂದು ನಾನು ಹೇಳಿಲ್ಲ. ಅಷ್ಟು ಕ್ರೂರಿ ಅಲ್ಲ ನಾನು. ತಪ್ಪಾಗಿದ್ದರೆ ಕ್ಷಮಿಸಿ' ಎಂದು ತಿಪ್ಪೆ ಸಾರಿಸಿದ್ದಾರೆ.

ಅಸುಮಲ್ ಎಂಬ ಯುವಕ ತಾರುಣ್ಯದಲ್ಲೇ ಮನೆ– ಮಠ ಬಿಟ್ಟು ಸಾಧು ಸಂತರ ಹಿಂದೆ ಓಡಾಡಿಕೊಂಡಿದ್ದವನು. ಕೆಲವು ವರ್ಷಗಳ ಬಳಿಕ ವೃಂದಾವನದಲ್ಲಿ ಆಸರೆ ಸಿಕ್ಕಿ ಆಸಾರಾಮ್ ಆದ. ಅವರ ಪ್ರವಚನಗಳಿಗೆ ಸಹಸ್ರಾರು ಸಂಖ್ಯೆಯಲ್ಲಿ ಜನ ಸೇರತೊಡಗಿದ ಬಳಿಕ ಈ ಸಾಧುವಿನ ಪ್ರತಿಷ್ಠೆಯೂ ಬೆಳೆಯಿತು. ಹಾಗೆಂದು ವಿವಾದಗಳು ಅಸಾರಾಂ ಬಾಪುಗೆ ಹೊಸತಲ್ಲ. 13 ವರ್ಷಗಳ ಹಿಂದೆ ಅಹ್ಮದಾಬಾದ್‌ನಲ್ಲಿ ರಾಜ್ಯ ಸರಕಾರ ಮಂಜೂರು ಮಾಡಿದ 10 ಎಕರೆ ಜಮೀನಿನ ಜತೆಗೆ ಪಕ್ಕದ ಗ್ರಾಮದ 18000 ಚದರ ಮೀಟರ್ ಜಮೀನನ್ನೂ ಕಬಳಿಸಿ ಗ್ರಾಮಸ್ಥರ ಪ್ರತಿಭಟನೆ ಎದುರಿಸಿದ್ದರು. 2008ರಲ್ಲಿ ಮೊಟೆರಾದಲ್ಲಿದ್ದ ಇವರ ಗುರುಕುಲದಲ್ಲಿ ಕಲಿಯುತ್ತಿದ್ದ ದೀಪೇಶ್ ಮತ್ತು ಅಭಿಷೇಕ್ ಎಂಬ 10ರ ಹರೆಯದ ಬಾಲಕರು ನಿಗೂಢವಾಗಿ ಕಣ್ಮರೆಯಾಗಿ ಬಳಿಕ ಸಬರಮತಿ ನದಿಯಲ್ಲಿ ಹೆಣಗಳು ಸಿಕ್ಕಿದ್ದವು. ಆಶ್ರಮದಲ್ಲಿ ಮಾಟ, ಮಂತ್ರ ನಡೆಯುತ್ತಿದೆ ಎಂಬ ಆರೋಪದ ಬಗ್ಗೆ ಸಿಓಡಿ ತನಿಖೆಯೂ ನಡೆಯಿತು. 2009ರಲ್ಲಿ ಬಾಪೂನ ಮಾಜಿ ಶಿಷ್ಯ ರಾಜು ಚಾಂದಕ್ ಎಂಬಾತನ ಕೊಲೆ ಯತ್ನ ನಡೆದು, ಈ ಗುರುವಿನ ವಿರುದ್ಧವೂ ಕೇಸು ದಾಖಲಾಗಿದೆ. ಇಷ್ಟಾಗಿಯೂ ಈ 'ದೇವಮಾನವ'ನ ಜನಪ್ರಿಯತೆ ಕುಗ್ಗಿಲ್ಲ ಎನ್ನುವುದು ಅಧ್ಯಯನಕ್ಕೆ ಅರ್ಹ ವಿಷಯ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65